# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೊರಮಾವು ಉಪ ವಿಭಾಗ,**

**ಮಹದೇವಪುರ ವಲಯ, ಬೆಂಗಳೂರು – 560 113.**

ಸಂಖ್ಯೆ:ಕಿ.ಅ/ವಾರ್ಡ್–25/ಪಿ.ಆರ್/ /2022–23 ದಿನಾಂಕ:–21.06.2022

## "ಸಭಾ ಸೂಚನಾ ಪತ್ರ"

**ವಿಷಯ:–** ದಿನಾಂಕ:–23.06.2022 ಗುರುವಾರ ಬೆಳಿಗ್ಗೆ 11.30 ಗಂಟೆಗೆ ಹೊರಮಾವು ಉಪವಿಭಾಗ ವಾರ್ಡ ನಂ.25 ರ ಕಛೇರಿಯಲ್ಲಿ ನಡೆಯುವ ಸಭೆಗೆ ಹಾಜರಾಗುವ ಬಗ್ಗೆ.

**ಉಲ್ಲೇಖ:–**ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020–21, ದಿನಾಂಕ:21/09/2020.

**********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಎಲ್ಲಾ ಇಲಾಖೆಯ ಅಧಿಕಾರಿಗಳು ವಾರ್ಡ ನಂ.25 ರ ಹೊರಮಾವು ಉಪವಿಭಾಗಕ್ಕೆ ಸಂಬಂಧಿಸಿದ ಮಾಹಿತಿಗಳೊಂದಿಗೆ ದಿನಾಂಕ:–23.06.2022 ಗುರುವಾರ ಬೆಳಿಗ್ಗೆ 11.30 ಗಂಟೆಗೆ ವಾರ್ಡ್ ನಂ.25 ರ ಸ.ಕಾ.ಅ ಹೊರಮಾವು ಕಛೇರಿಗೆ ಹಾಜರಾಗಲು ಕೋರಲಾಗಿದೆ.

**ವಿಶೇಷ ಸೂಚನೆ:–** Covid–19 ಇರುವುದರಿಂದ ಎಲ್ಲಾರು ಕಡ್ಡಾಯವಾಗಿ ಸ್ಯಾನಿಟೈಜರ್ ಬಳಸಿ, ಮಾಸ್ಕ ಧರಿಸಬೇಕು ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.

ಸಂಚಾಲಕರು
ಮತ್ತು ಸಹಾಯಕ ಅಭಿಯಂತರರು
ಹೊರಮಾವು ವಾರ್ಡ ಸಂಖ್ಯೆ–25.

ರವರಿಗೆ.

1. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಪುರ ವಿಭಾಗ, ಬಿಬಿಎಂಪಿ.
2. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಮಹದೇವಪುರ ವಲಯ) ಬಿಬಿಎಂಪಿ.
3. ಕಾರ್ಯಪಾಲಕ ಅಭಿಯಂತರರು, ಬಿಡಬ್ಲೂಎಸ್ಎಸ್‌ಬಿ. ಸಿಎಂಸಿ
4. ಕಾರ್ಯಪಾಲಕ ಅಭಿಯಂತರರು, ಬಿಡಬ್ಲೂಎಸ್ಎಸ್‌ಬಿ. 110 ಹಳ್ಳಿಗಳ ವ್ಯಾಪ್ತಿ.
5. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
6. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು ಬಿಬಿಎಂಪಿ.
7. ಕಾರ್ಯಪಾಲಯ ಅಭಿಯಂತರರು, ಕೆರೆಗಳ ವಿಭಾಗ, ಬಿಬಿಎಂಪಿ.
8. ಕಾರ್ಯಪಾಲಯ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿಬಿಎಂಪಿ.
9. ಆರೋಗ್ಯ ವೈಧ್ಯಾಧಿಕಾರಿಗಳು, ಕೆ.ಆರ್.ಪುರ.
10. ಸಹಾಯಕ ನಿರ್ದೇಶಕರು, ನಗರ ಯೋಜನೆ, ಮಹದೇವಪುರ ವಲಯ. ಬಿಬಿಎಂಪಿ.
11. ಡಾ//ಶಿವಕುಮಾರ್, ಆರೋಗ್ಯಾಧಿಕಾರಿಗಳು, ಕೆ.ನಾರಾಯಣಪುರ ಪ್ರಾಥಮಿಕ ಆರೋಗ್ಯ ಕೇಂದ್ರ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ, ಕೆ.ಆರ್.ಪುರ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪವಿಭಾಗ, ಬಿಬಿಎಂಪಿ.
14. ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ. ಆರ್.ಟಿ.ನಗರ.
15. ಕಲ್ಯಾಣಾಧಿಕಾರಿಗಳು, ಮಹದೇವಪುರ ವಲಯ, ಬಿಬಿಎಂಪಿ.
16. ಪೊಲೀಸ್‌ಠಾಣೆ ಅಧಿಕಾರಿ ಹೆಣ್ಣೂರು/ಕೊತ್ತನೂರು/ರಾಮಮೂರ್ತಿನಗರ.
17. ಪೊಲೀಸ್ ಇನ್ಸ್‌ಪೆಕ್ಟರ್, ಲಾ ಅಂಡ್ ಆರ್ಡರ್ ರಾಮಮೂರ್ತಿನಗರ/ಕೊತ್ತನೂರು/ಹೆಣ್ಣೂರು ಪೊಲೀಸ್ ಠಾಣೆ. /ಟ್ರಾಫಿಕ್
18. ಪೊಲೀಸ್ ಇನ್ಸ್‌ಪೆಕ್ಟರ್, ಸಂಚಾರ ವಿಭಾಗ. ಬಾಣಸವಾಡಿ/ಕೆ.ಆರ್.ಪುರ.
19. ಕಛೇರಿ ಪ್ರತಿ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ, ಹೊರಮಾವು ಗ್ರಾಮ, ಬೆಂಗಳೂರು- 560113**

ಸಂಖ್ಯೆ:ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2022-23 ದಿನಾಂಕ: 23.06.2022

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ರ ಆದೇಶದಂತೆ ಹೊರಮಾವು ವಾರ್ಡ್ ಸಂಖ್ಯೆ-25 ರ ನೋಡಲ್ ಅಧಿಕಾರಿಯಾದ ಶ್ರೀಮತಿ.ಸರೋಜದೇವಿ ಉಪ ಆಯುಕ್ತರು (ಮಹದೇವಪುರ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:-23.06.2022 ರಂದು ಪೂರ್ವಾಹ್ನ 11.30 ಗಂಟೆಗೆ ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

<u>ಉಪಸ್ಥಿತರು:</u>

| ಕ್ರಸಂ | ಹೆಸರು | ಹುದ್ದೆ |
|---|---|---|
| | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ-ಆಯುಕ್ತರು (ಮಹದೇವಪುರ) |
| 2 | ಶ್ರೀ.ರಮೇಶ್ | ಕಿರಿಯ ಅಭಿಯಂತರರು |
| 3 | ಶ್ರೀ.ಚೈತ್ರ ವೆಂಕಟೇಶ್ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂಎಸ್.ಎಸ್.ಬಿ |
| | ಸಾರ್ವಜನಿಕರು | |
| 4 | ಶ್ರೀ.ತಿರು, ಶ್ರೀ.ಪ್ರವೀಣ್, ಶ್ರೀ.ನವೀನ್, ಶ್ರೀ.ಜಗದೀಶ್, ಶ್ರೀ.ಸೋಮು | ಹೊಯ್ಸಳನಗರ ಎನ್‌ಕ್ಲೇವ್ ವೆಲ್‌ಫೇರ್ ಅಸೋಸಿಯೇಷನ್: |
| 5 | ಶ್ರೀ.ಮುರಳಿ.ಕೆ | ಹಾರ್ಕ್ ಗ್ರೂಪ್, ಹೊರಮಾವು ಗ್ರಾಮ |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

ಮು.ತಿ.ನೋ

ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-

ಶ್ರೀ.ಶಿರು, ಶ್ರೀ.ಪ್ರವೀಣ್, ಶ್ರೀ.ನವೀನ್, ಶ್ರೀ.ಜಗದೀಶ್, ಶ್ರೀ.ಸೋಮು ಹೊಯ್ಸಳನಗರ ಎನ್‌ಕ್ಲೇವ್ ವೆಲ್‌ಫೇರ್ ಅಸೋಸಿಯೇಷನ್:- ರವರು ಮಾತನಾಡಿ ಹೊಯ್ಸಳನಗರ 6ನೇ ಕ್ರಾಸ್‌ನಲ್ಲಿ ರಸ್ತೆ ಅಭಿವೃದ್ಧಿಪಡಿಸಿ ಡಾಂಬರೀಕರಣ ಮಾಡಲು ಮತ್ತು 4ನೇ ಕ್ರಾಸ್‌ನಲ್ಲಿ ಆರ್.ಸಿ.ಸಿ ಚರಂಡಿ ನಿರ್ಮಿಸಲು 5ನೇ ಮುಖ್ಯರಸ್ತೆಯಲ್ಲಿ ಡಾಂಬರೀಕರಣ ಮಾಡಲು ಮತ್ತು ಈ ರಸ್ತೆಯಲ್ಲಿ ಚರಂಡಿಗೆ ಅಡ್ಡಲಾಗಿ ಮರದ ಬುಡವು ಬಂದಿದ್ದು, ಚರಂಡಿನೀರು ಸರಾಗವಾಗಿ ಹರಿಯುತ್ತಿರುವುದಿಲ್ಲ ಆದ ಕಾರಣ ಸದರಿ ಬೇರನ್ನು ತುರ್ತಾಗಿ ತೆರವುಮಾಡಿಕೊಡಲು ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ಸಹಾಯಕ ಕಾರ್ಯಪಾಲಕ ಅಭಿಯಂತರರು, ಉಪ ವಲಯ ಅರಣ್ಯಾಧಿಕಾರಿಗಳು ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀ.ಮುರಳಿ.ಕೆ ಹೊರಮಾವು ಗ್ರಾಮ ಹಾಗೂ ಪಾರ್ಕ್ ಗ್ರೂಪ್ ರೆಸಿಡೆನ್ಸಿ ವೆಲ್‌ಫೇರ್ ಅಸೋಸಿಯೇಷನ್:- ರವರು ಮಾತನಾಡುತ್ತಾ, ಹೊರಮಾವು ಗ್ರಾಮದ ಸರ್.ಎಂ.ವಿಶ್ವೇಶ್ವರಯ್ಯ ಸಾರ್ವಜನಿಕ ರಸ್ತೆಗೆ ಅಡ್ಡಲಾಗಿ ಶೆಡ್‌ನ್ನು ಹಾಕಿಕೊಂಡಿದ್ದು, ಇದರಿಂದ ತೊಂದರೆಯಾಗುತ್ತಿದ್ದು, ಕೂಡಲೇ ತೆರವುಗೊಳಿಸಿಕೊಡಲು ಕೋರಿಕೊಂಡಿರುತ್ತಾರೆ. ಇದಕ್ಕೆ ಪ್ರತಿಯಾಗಿ ಸಹಾಯಕ ಅಭಿಯಂತರರು ಮಾತನಾಡಿ ಸದರಿ ಜಾಗವು ಖಾಸಗಿ ಜಾಗವಾಗಿದ್ದು, ಇಲ್ಲಿನ ಸ್ವತ್ತಿನ ಮಾಲೀಕರು ನಮ್ಮದು ಜಾಗವೆಂದು ಶೆಡ್‌ನ್ನು ತೆರವುಗೊಳಿಸಲು ಹೋದಾಗ ಅಡ್ಡಿಪಡಿಸುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದ್ದು, ಇದಕ್ಕೆ ಶ್ರೀ.ಮುರಳಿ.ಕೆ ಎಸ್.ಎಲ್.ವಿ ವಜ್ರ ವಸತಿ ಸಮುಚ್ಚಯ ನಿವಾಸಿರವರು 2014ನೇ ಸಾಲಿನಲ್ಲಿ ವಸತಿ ಸಮುಚ್ಚಯ ನಿರ್ಮಿಸುವಾಗ ಸ್ವತ್ತಿನ ಮಾಲೀಕರು ಮಂಜೂರಾತಿ ನಕ್ಷೆ ಪಡೆದಿದ್ದು ಮಂಜೂರಾತಿ ನಕ್ಷೆಯಲ್ಲಿ ಸದರಿ ರಸ್ತೆಯ ಅಗಲವು 9.15 ಮೀಟರ್ ಇದ್ದು, ಈ ರಸ್ತೆಯಲ್ಲಿ ಮಾಲೀಕರೇ ರಸ್ತೆಯನ್ನು ಬಿಟ್ಟುಕೊಟ್ಟಿದ್ದು, ಇದರಂತೆ ರಸ್ತೆಯಲ್ಲಿರುವ ಅನಧಿಕೃತ ಶೆಡ್‌ನ್ನು ಪೋಲೀಸ್ ರಕ್ಷಣೆ ಪಡೆದು ತೆರವುಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ-ವಿಭಾಗ ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

23/6/22
ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

23/6/2022
ಕಿರಿಯ ಅಭಿಯಂತರರು
ಹೊರಮಾವು ವಾರ್ಡ್‌ಸಂಖ್ಯೆ-25
ಬಿ.ಬಿ.ಎಂ.ಪಿ.